ಮೂಲ ದಾವಾ ಸಂಖ್ಯೆ 3/2019

ಪಿ ಡಬ್ಲ್ಯೂ-2

**(ದಿನಾಂಕ 28.03.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ನ್ಯಾಯಾಲಯದ ಅನುಮತಿ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆ ಪ್ರತಿವಾದಿ ಪರ ಶ್ರೀ ವಕೀಲರಿಂದಃ-**

ವಿಲ್ ನಿ ಪಿ 17 ರಲ್ಲಿ ನನ್ನ ಸಹಿ ಇರುತ್ತದೆ. ನನ್ನ ಸಹಿಯನ್ನು ನಿ ಪಿ 17 (ಬಿ) ಅಂತಾ ಗುರುತಿಸಲಾಗಿದೆ. ಮತ್ತೊಬ್ಬ ಸಾಕ್ಷಿದಾರರಾಗಿ ರುದ್ರೇಶ್ ಸಹಿ ಮಾಡಿರುತ್ತಾರೆ. ರುದ್ರೇಶ್ ರವರ ಸಹಿಯನ್ನು ನಿ ಪಿ 17 (ಎ) ಅಂತಾ ಗುರುತಿಸಲಾಗಿದೆ. ಸೌಭಾಗ್ಯಮ್ಮನ ಸಹಿ ಗುರುತಿಸುತ್ತೇನೆ. ಸೌಭಾಗ್ಯಮನ ಸಹಿ ನಿ ಪಿ 17(ಸಿ) ಅಂತಾ ಗುರುತಿಸಲಾಗಿದೆ. ಪತ್ರವನ್ನು ಪ್ರಾಣೇಶ ರಾವ್ ಬರೆದಿರುತ್ತಾರೆ. ಪ್ರಾಣೇಶ್ ರಾವ್ ರವರ ಸಹಿಯನ್ನು ನಿ ಪಿ 17 (ಡಿ) ಅಂತಾ ಗುರುತಿಸಲಾಗಿದೆ .

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಪಿ ಜೆ ಜಿ ವಕೀಲರಿಂದಃ-**

ನನ್ನ ಊರು ಕಂಚಿಕೇರಿ ಗ್ರಾಮ. ವೀರಯ್ಯ ಕೊಟ್ರಯ್ಯ ಕ್ಯಾರೆಕಟ್ಟಿ ಗ್ರಾಮ. ನಮಗೂ ಅವರಿಗೂ ಗೆಳೆತನ ಇರುತ್ತದೆ. ಸೌಭಾಗ್ಯಮ್ಮ ಕೂಡ ಕ್ಯಾರೆಕಟ್ಟಿ ಗ್ರಾಮದವರು. ನಮ್ಮ ಊರಿನಿಂದ ಕ್ಯಾರೆಕಟ್ಟಿ ಗ್ರಾಮ 7 ಕಿ ಮೀ ಆಗುತ್ತದೆ. ಸೌಭಾಗ್ಯಮ್ಮ ನಮ್ಮ ಕುಟುಂಬದ ಸ್ನೇಹಿತರು. ಸೌಭಾಗ್ಯಮ್ಮ ಓದಿರಲಿಲ್ಲ. ದಿನಾಂಕ 17.02.2006 ರಂದು ಬೆಳಿಗ್ಗೆ 7 ಗಂಟೆಗೆ ಕಂಚಿಕೇರಿಗೆ ನಮ್ಮ ಮನೆಗೆ ಬಂದರು. ರುದ್ರೇಶ್ ಕಂಚಿಕೇರಿ ಗ್ರಾಮದವರು. ಸೌಭಾಗ್ಯಮ್ಮ ಬೀಗತನ ದಿಂದ ಪರಿಚಯ. ನಾನು ಮತ್ತು ರುದ್ರೇಶ್ ಲಿಂಗಾಯತರು. ಸೌಭಾಗ್ಯಮ್ಮ ಸ್ವಾಮಿಯರು. ಸೌಭಾಗ್ಯಮ್ಮ ಯಾವ ಯಾವ ಆಸ್ತಿಗಳನ್ನು ವಿಲ್ ಬರೆದ ಮಾಲಿಕತ್ವದ ಆಸ್ತಿಗಳು ಎಂದರೆ ಮೊದಲು ನೆನಪಿತ್ತು ಈಗ ನೆನಪಿಲ್ಲಾ. ಅವರು ಪಹಣಿಗಳನ್ನು ತಂದಿದ್ದರು. ಯಾವ ಯಾವ ಆಸ್ತಿಗಳು ಸೌಭಾಗ್ಯಮನ ಹೆಸರಿನಲ್ಲಿ ಪಹಣಿ ಇತ್ತು ಅಂತಾ ಈಗ ನೆನಪಿಲ್ಲಾ. ಎಲ್ಲಾ ಆಸ್ತಿಗಳು ಸೌಭಾಗ್ಯಮ್ಮನ ಹೆಸರಿನಲ್ಲಿ ಇತ್ತು ನಾನು ನೋಡಿರುತ್ತೇನೆ. ಸೌಭಾಗ್ಯಮ್ಮ ಒಬ್ಬರೇ ಎಲ್ಲಿ ಹೋಗುತ್ತಿರಲಿಲ್ಲ

ಎಂದರೆ ಸರಿಯಲ್ಲ. ಸೌಭಾಗ್ಯಮ್ಮನಿಗೆ ಪಾರ್ಶ್ವವಾಯು ಆಗಿತ್ತು ಎಂದರೆ ಸರಿಯಲ್ಲ. ಅವರು ಆರೋಗ್ಯವಾಗಿದ್ದರು. ಸೌಭಾಗ್ಯಮ್ಮನ ಗಂಡ ಗುರುಬಯ್ಯ. ಸೌಭಾಗ್ಯಮ್ಮ ಮತ್ತು ಅವರ ಗಂಡ ಗುರುಬಸ್ಸಯ್ಯ ಅನೋನ್ಯವಾಗಿದ್ದರು. ಸೌಭಾಗ್ಯಮ್ಮ ಗಂಡ ಗುರುಬಸಯ್ಯ ನನ್ನು ಕೇಳದೇ ಯಾವುದೇ ವ್ಯವಹಾರ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ವಿಲ್ ಮಾಡುವ ದಿನ ಸೌಭಾಗ್ಯಮ್ಮ ಒಬ್ಬರೇ ಬಂದಿರುತ್ತಾರೆ. ಆ ಸಮಯದಲ್ಲಿ ನಾನು ನನ್ನ ತಂದೆ ಇದ್ದೆವು. ರುದ್ರೇಶ ಮತ್ತು ನಾವು ದಾವಣಗೆರೆಗೆ ಹೋಗಲು 18 ಕಿ ಮೀ ಆಗುತ್ತಿತ್ತು. ಹರಪನಹಳ್ಳಿಗೆ ಬರಲು 20 ಕಿ ಮೀ ಆಗುತ್ತಿತ್ತು. ದಾವಣಗೆರೆಗೆ ವಿಲ್ ಬರೆಯಲು ಹೋದಾಗ ನಾನು ಸೌಭಾಗ್ಯಮ್ಮ ರುದ್ರೇಶ ಹೋಗಿರುತ್ತೇವೆ. ಪತ್ರ ಬರಹಗಾರರನ್ನು ಯಾರು ಕರೆದರು ಎಂದರೆ ಸೌಭಾಗ್ಯಮ್ಮನೇ ಕರೆದಿರುತ್ತಾರೆ. ಪ್ರಾಣೇಶ್ ರಾವ ಪತ್ರ ಬರಹಗಾರರಾಗಿರುವ ಕಾರಣ ಅವರ ಹತ್ತಿರ ಹೋಗಿರುತ್ತಾರೆ. ದಾವಣಗೆರೆಗೆ ಹೋದಾಗ 11.30 ಗಂಟೆ ಆಗಿರುತ್ತದೆ. ಪತ್ರ ಬರೆಯಲು ಒಂದು ತಾಸು ಆಗಿರುತ್ತದೆ. ಒಂದೇ ಬಿಳಿ ಹಾಳೆಯ ಮೇಲೆ ಮೊದಲು ಕಚ್ಚಾ ವಿಲ್ ಬರೆದಿರುತ್ತಾರೆ. ಕಚ್ಚಾ ವಿಲ್ಲನ್ನು ಸಬ್ ರಜಿಸ್ಟ್ರರ ಕಚೇರಿಯಲ್ಲಿ ಪ್ರಾಣೇಶ್ ರಾವ್ ಟೈಪ್ ಮಾಡಿಸಿರುತ್ತಾರೆ. ಆಗ ಬರೆದು ತಯಾರಿಸಲು ಒಂದು ತಾಸು ಆಗಿರುತ್ತದೆ. ಬಿಳಿ ಹಾಳೆಯ ಮೇಲೆ ಮೊದಲು ಕಚ್ಚಾ ವಿಲ್ ಬರೆದಿದ್ದು ಏನು ಆಯಿತು ಎಂದರೆ ಹರಿದು ಹಾಕಿರುತ್ತಾರೆ. ಬಿಳಿ ಹಾಳೆಯ ಮೇಲೆ ಮೊದಲು ಕಚ್ಚಾ ವಿಲ್ ಬರೆದಿದ್ದು ನಂತರ ಹರಿದು ಹಾಕಿರುತ್ತಾರೆ ಅಂತಾ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿಲ್ಲಾ. ಸೌಭಾಗ್ಯಮ್ಮನಿಗೆ ಪ್ರತಿವಾದಿ ಕೊಟ್ರಯ್ಯ ಸಂಬಂಧಿಕರು. ಹೇಗೆ ಸಂಬಂಧ ಅಂತಾ ಗೊತ್ತಿಲ್ಲಾ. ಸೌಬಾಗ್ಯಮ್ಮನಿಗೆ ಆರೋಗ್ಯ ಸರಿಇರಲಿಲ್ಲ ಪಾರ್ಶ್ವವಾಯು ಆಗಿತ್ತು ಎಂದರೆ ಸಾಯುವಾಗ ಹಾಗೆ ಆಗಿತ್ತು. ಸೌಭಾಗ್ಯಮ್ಮನಿಗೆ ನಿರ್ಧಾರ ಮಾಡುವ ಶಕ್ತಿ ಇರಲಿಲ್ಲ ಎಂದರೆ

ಮೂಲ ದಾವಾ ಸಂಖ್ಯೆ 3/2019

ಪಿ ಡಬ್ಲೂ್ಯ-2

ಸರಿಯಲ್ಲ. ಸೌಭಾಗ್ಯಮ್ಮ ಗಂಡನಿಗೆ ಬಿಟ್ಟು ಎಲ್ಲಿ ಹೊಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಸೌಭಾಗ್ಯಮ್ಮ ಮತ್ತು ಅವರ ಗಂಡ 1ನೇ ಪ್ರತಿವಾದಿಯನನ್ನು ಸಾಕು ಮಾಗನಾಗಿ ಮಾಡಿಕೊಂಡಿದ್ದರು ಎಂದರೆ ಗೊತ್ತಿಲ್ಲ. ಗುರುಬಸಯ್ಯನ ತಮ್ಮನ ಮಕ್ಕಳು ಅಜ್ಜಯ್ಯ ಮತ್ತು ಕೊಟ್ರಯ್ಯ ಎಂದರೆ ಸರಿ. ಅಜ್ಜಯ್ಯನನ್ನು ಸಣ್ಣ ಮಗು ಆದಾಗಿನಿಂದ ಗುರುಬಸ್ಸಯ್ಯ ಮತ್ತು ಸೌಭಾಗ್ಯಮ್ಮ ಓದಿಸಿ ಬೆಳೆಸಿದ್ದಾರೆ ಎಂದರೆ ಸರಿಯಲ್ಲ. ಈ ಕಾರಣ ದಿಂದ ಗುರುಬಸ್ಸಯ್ಯ ಎಲ್ಲಿ ಎಲ್ಲಿ ನೌಕರಿ ಮಾಡಿದ್ದಾರೋ ಅಲ್ಲಿ ಅಜ್ಜಯ್ಯ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಅಜ್ಜಯ್ಯನ ಎಲ್ಲಾ ಶಾಲಾ ದಾಖಲಾತಿಗಳಲ್ಲಿ ತಂದೆ ಗುರುಬಸಯ್ಯ ಅಂತಾ ಬರೆದಿದೆ ಎಂದರೆ ಗೊತ್ತಿಲ್ಲ. ಗುರುಬಸ್ಸಯ್ಯ ಶಿಕ್ಷಕರಾದ ಕಾರಣ ಅವರೇ ಅಜ್ಜಯ್ಯನನ್ನು ಶಾಲೆಗೆ ಸೇರಿಸಿದ್ದರು ಎಂದರೆ ಗೊತ್ತಿಲ್ಲ. ಸೌಭಾಗ್ಯಮ್ಮ ದಾವಣಗೆರೆಗೆ ಕರೆದುಕೊಂಡು ಹೋಗಿ ವಿಲ್ ಬರೆಸಿಲ್ಲ ಎಂದರೆ ಸರಿಯಲ್ಲ. ಸೌಭಾಗ್ಯಮ್ಮ ಅನಾರೋಗ್ಯ ದಿಂದ ನರಳುತ್ತಿದ್ದಾಗ ವಿಲ್ಲನ್ನು ನಾವೇ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಿಲ್ಲನ್ನು ನಾನು ಓದಿ ಹೇಳಿಲ್ಲ ಸೌಭಾಗ್ಯಮ್ಮ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳ ಪರವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸೌಭಾಗ್ಯಮ್ಮ ಗುರುಬಸ್ಸಯ್ಯ ರವರಿಗೆ ಬಹಳಷ್ಟು ಸಂಬಂಧಿಕರು ಇದ್ದಾರೆ ಎಂದರೆ ಸರಿ. ಅವರದ್ದು ದೊಡ್ಡ ಬಳಗ ಎಂದರೆ ಸರಿ. ಹೀಗಾಗಿ ಸೌಭಾಗ್ಯಮ್ಮ ನನ್ನು ಕರೆದುಕೊಂಡು ಹೋಗಿ ವಿಲ್ ಮಾಡಿಸುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.

ಮೂಲ ದಾವಾ ಸಂಖ್ಯೆ 3/2019

ಪಿ ಡಬ್ಲ್ಯೂ-3

**(ದಿನಾಂಕ 28.03.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಪಿ ಜೆ ಜಿ ವಕೀಲರಿಂದಃ-**

ನನ್ನ ಊರು ತೆಲಗಿ ಗ್ರಾಮ. ವೀರಯ್ಯ ಕೊಟ್ರಯ್ಯ ಕ್ಯಾರೆಕಟ್ಟಿ ಗ್ರಾಮ. ನಮಗೂ ಅವರಿಗೂ ಗೆಳೆತನ ಇರುತ್ತದೆ. ಸೌಭಾಗ್ಯಮ್ಮ ಕೂಡ ಕ್ಯಾರೆಕಟ್ಟಿ ಗ್ರಾಮದವರು. ನಮ್ಮ ಊರಿನಿಂದ ಕ್ಯಾರೆಕಟ್ಟಿ ಗ್ರಾಮ 25 ಕಿ ಮೀ ಆಗುತ್ತದೆ. ಸೌಭಾಗ್ಯಮ್ಮ ತಂದೆ ಹೆಸರು ನೆನಪಿಲ್ಲಾ. ಸೌಭಾಗ್ಯಮ್ಮನಿಗೆ ಗುರುಬಸ್ಸಯ್ಯ ಏನು ಆಗಬೇಕು ಗೊತ್ತಿಲ್ಲಾ. ಸೌಭಾಗ್ಯಮ್ಮನನ್ನು ಕಂಚಿಕೇರಿಯಲ್ಲಿ ಭೇಟಿ ಆಗಿರುತ್ತೇವೆ. ಆಗ 11.30 ರಿಂದ 12 ಗಂಟೆ ಆಗಿತ್ತು. ಸೌಭಾಗ್ಯಮ್ಮ ಏನೇನು ದಾಖಲೆ ತಂದಿದ್ದರು ಎಂದರೆ ಗೊತ್ತಿಲ್ಲಾ. ನಾನು ಎಸ್ ಎಸ್ ಎಲ್ ಸಿ ಓದಿರುತ್ತೇನೆ. ಎಸ್ ಎಸ್ ಎಲ್ ಸಿ ಪಾಸ್ ಆದ ತಾರೀಖು ಹೇಳಲು ಆಗುವುದಿಲ್ಲಾ. ದಿನಾಂಕ 17.02.2006 ತಾರೀಖು ಹೇಗೆ ಗೊತ್ತಾಯಿತು ಎಂದರೆ ಅದು ನೆನಪು ಇತ್ತು. ಸೌಭಾಗ್ಯಮ್ಮನಿಗೆ ಪಾರ್ಶ್ವವಾಯು ಆಗಿತ್ತು ಎಂದರೆ ಸರಿ. ಅವರಿಗೆ ವಿಲ್ ಬರೆಸಲು ಬುದ್ದಿ ಇರಲಿಲ್ಲ ಎಂದರೆ ಸರಿಯಲ್ಲ. ಪತ್ರ ಬರಹಗಾರರನ್ನು ಯಾರು ಕರೆದರು ಎಂದರೆ ಸೌಭಾಗ್ಯಮ್ಮನೇ ಕರೆದಿರುತ್ತಾರೆ. ವಿಲ್ ಮಾಡುವ ದಿನ ಸೌಭಾಗ್ಯಮ್ಮ ಏನು ಮಾಹಿತಿ ಕೊಟ್ಟರು ಎಂದರೆ ನನಗೆ ಗೊತ್ತಿಲ್ಲಾ. ಒಂದೇ ಬಿಳಿ ಹಾಳೆಯ ಮೇಲೆ ಮೊದಲು ಕಚ್ಚಾ ವಿಲ್ ಬರೆದಿರುತ್ತಾರೆ. ಬಿಳಿಹಾಳೆಯ ಮೇಲೆ ಸೌಭಾಗ್ಯಮ್ಮನ ಸಹಿ ಪಡೆದಿರುವುದಿಲ್ಲಾ. ಕಚ್ಚಾ ವಿಲ್ಲನ್ನು ಎಲ್ಲಿ ಟೈಪ್ ಮಾಡಿಸಿದ್ದರು ಗೊತ್ತಿಲ್ಲಾ. ಪ್ರಾಣೇಶ್ ರಾವ್ ಟೈಪ್ ಮಾಡಿಸಿರುತ್ತಾರೆ. ಆಗ ಬರೆದು ತಯಾರಿಸಲು ಒಂದು ತಾಸು ಆಗಿರುತ್ತದೆ. ಸೌಭಾಗ್ಯಮ್ಮ ಎಲ್ಲಿಯು ಒಬ್ಬರೇ ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಸೌಭಾಗ್ಯಮ್ಮ ಗಂಡನ ಜೊತೆಗೆ ಹೋಗುತ್ತಿದ್ದರು ಎಂದರೆ ಗಂಡ ತೀರಿಕೊಂಡಿದ್ದರು. ಸೌಭಾಗ್ಯಮ್ಮನ ಬಗ್ಗೆ ಏನು

ಗೊತ್ತಿಲ್ಲದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸೌಭಾಗ್ಯಮ್ಮನಿಗೆ ಪ್ರಾಣೇಶ್ ರಾವ್ ಓದಿ ಹೇಳಿದ ನಂತರ ಸಹಿ ಮಾಡಿದರು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸೌಭಾಗ್ಯಮ್ಮ ವಿಲ್ ಗೆ ನಮಗೆ ಸಹಿ ಮಾಡಿ ಅಂತಾ ಹೇಳಿರುವುದಿಲ್ಲಾ ಎಂದರೆ ಸರಿಯಲ್ಲ. ಸೌಭಾಗ್ಯಮ್ಮ ಯಾವುದೇ ವಿಲ್ ಬರೆದಿಲ್ಲಾ ಎಂದರೆ ಸರಿಯಲ್ಲ. ಸೌಭಾಗ್ಯಮ್ಮನಿಗೆ ನಿರ್ಧಾರ ಮಾಡುವ ಶಕ್ತಿ ಇರಲಿಲ್ಲ ಎಂದರೆ ಸರಿಯಲ್ಲ. ವೀರಯ್ಯ ಕೊಟ್ರಯ್ಯ ಹೇಗೆ ಪರಿಚಯ ಎಂದರೆ ಸೌಭಾಗ್ಯಮ್ಮ ನಿಂದ ಪರಿಚಯು ಆಗಿರುತ್ತದೆ. ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ವಿಲ್ ಸೃಷ್ಟಿ ಮಾಡಿ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ:-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.